**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 1182/2019</u>**

**<u>ಪಿಡಬ್ಲೂ-11</u>**

**<u>ಸಿಡಬ್ಲೂ-10</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಗೌರಮ್ಮ |
| ಗಂಡನ ಹೆಸರು | - | ದ್ಯಾವನಾಯಕ |
| ವಯಸ್ಸು | - | 40 |
| ಕೆಲಸ | - | ಅಡಿಗೆ ಕೆಲಸ, ದೊಡ್ಡೆಕೊಪ್ಪಲು ಸರ್ಕಾರಿ ಶಾಲೆ |
| ವಾಸ | - | ದೊಡ್ಡೇಕೊಪ್ಪಲು |

**<u>ದಿನಾಂಕ 04.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ನಾನು ದೊಡ್ಡೆಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ಬಿಸಿಯೂಟ ಅಡಿಗೆ ಕೆಲಸವನ್ನು ಮಾಡುತ್ತಿದ್ದೇನೆ. ಚಾಸಾ 1 ರವರು ಸದರಿ ಶಾಲೆಗೆ ಮುಖ್ಯೋಪಾದ್ಯಯರು ಆಗಿರುತ್ತಾರೆ. ಚಾಸಾ 9 ರವರು ಸದರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಸದರಿ ಶಾಲೆಯಲ್ಲಿ 15 ವರ್ಷಗಳಿಂದ ಅಡಿಗೆ ಕೆಲಸ ಮಾಡುತ್ತಿದ್ದೇನೆ. ದಿಃ 19.08.2014 ರಂದು ಶಾಲೆ ಮುಗಿದ ಕಾರಣ ಶಾಲೆಗೆ ಬಾಗಿಲು ಹಾಕಿಕೊಂಡು ಮನೆಗೆ ಹೋಗಿರುತ್ತೇವೆ. ಒಂದು ದಿನ ದಿಃ 20.08.2014 ರಂದು ಬೆಳಿಗ್ಗೆ 9 ಗಂಟೆಗೆ ಶಾಲೆಯ ಬಳಿ ಬಂದು ನೋಡಲಾಗಿ ಯಾರು ಕಳ್ಳರು ಸದರಿ ಶಾಲೆಯ ಅಡಿಗೆ ಮನೆಯ ಬೀಗ ಒಡೆದು ಅಡಿಗೆ ಮನೆಯಲ್ಲಿದ್ದ ಗ್ಯಾಸ್, ಸಿಲಿಂಡರ್ ಹಾಗೂ ಅಡಿಗೆ ಸಾಮಾನುಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಕಳುವಾಗಿರುವ ಗ್ಯಾಸ್ ಸಿಲಿಂಡರ್ ನಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಬಿಸಿ ಊಟ ತಯಾರಿಸಲು ಉಪಯೋಗಿಸುತ್ತಿದ್ದೇವು. ಸಾಕ್ಷಿಯು ನಿಪಿ 3 ರಲ್ಲಿರುವ ಗ್ಯಾಸ್ ಸಿಲಿಂಡರ್ ನೋಡಿ ಗುರುತಿಸಿರುತ್ತಾರೆ. ಸದರಿ ಗ್ಯಾಸ್ ಸಿಲಿಂಡರ್ ಕಳುವಾಗಿದ್ದ ನಮ್ಮ ಶಾಲೆಯ ಸಿಲಿಂಡರ್ ಆಗಿರುತ್ತದೆ. ನಮ್ಮ ಶಾಲೆಯ ಬೀಗವನ್ನು ಆರೆಯಿಂದ ಮೀಟಿ ಬೀಗ ಒಡೆದು ಶಾಲೆಯಲ್ಲಿ ಕಳ್ಳತನ ಮಾಡಿರುವುದು ಕಂಡುಬಂದಿರುತ್ತದೆ.

**<u>ಪಾಟೀ ಸವಾಲು ಶ್ರೀ ಎಂ.ಸಿ.ಎಸ್ ಆರೋಪಿತರ ಪರ ವಕೀಲರುಃ</u>**

ನಾನು ಶಾಲೆಯಲ್ಲಿ 2ನೇ ಅಡಿಗೆ ಮಾಡುವವಳು. ನಾವು ಬಂದಾಗ ಬೀಗದ ಕೈ ಪಡೆಯುತ್ತೇವೆ. ಕೆಲಸ ಮುಗಿಸಿ ಹೋಗುವಾಗ ವಾಪಸ್ಸು ಕೊಟ್ಟು ಹೋಗುತ್ತೇವೆ. ಪ್ರತಿ ತಿಂಗಳು ಸಾಮಾಗ್ರಿಗಳು ಬಂದಾಗ ಮುಖ್ಯೊಪಾದ್ಯಯರು ಇಂಟೆಂಟ್ ಬರೆಯುತ್ತಾರೆ ಎಂದರೆ ಸರಿ. ಪ್ರತಿದಿನ ಅಡಿಗೆಗೆ ಸಾಮಾನು ಕೊಡುವಾಗ ಇಂಟೆಂಟ್ ಬರೆಯುತ್ತಾರೆ ಎಂದು ನುಡಿಯುತ್ತಾರೆ. ಕಳ್ಳತನ ಆದ ದಿನದಂದು ಎಷ್ಟು ಅಕ್ಕಿ ಮತ್ತು ಬೆಳೆ ಮಿಕ್ಕಿತ್ತು ಎಂದು ಹೇಳಲಾಗುವುದಿಲ್ಲ. ಅಡಿಗೆ ಮನೆಯೊಳಗೆ ಎಷ್ಟು ಕೆಜಿ ದಿನಸಿ ಸಾಮಾನುಗಳು ಇತ್ತು ಎಂದು ನನಗೆ ಗೊತ್ತಿಲ್ಲ. ಶಾಲೆಗೆ ಅಡಿಗೆ ಸಲುವಾಗಿ ಅಕ್ಕಿ ಬೇಳೆ, ಎಣ್ಣೆ, ಗೋಧಿ ನೀಡುತ್ತಾರೆ. ಅಡಿಗೆ ಕೊಣೆಯಲ್ಲಿ ಅಕ್ಕಿ ಬೇಳೆ, ಎಣ್ಣೆ ಶೇಖರಿಸಿರುತ್ತೇವೆ. ಮತ್ತೊಂದು ಕೊಣೆಯಲ್ಲಿ ಎಲ್ಲ ದಿನಸಿಗಳನ್ನು ಒಟ್ಟಿಗೆ ಇಡುತ್ತೇವೆ. ಆ ದಿನ ಎಷ್ಟು ಕೆಜಿ ದಿನಸಿ ಮತ್ತು ಯಾವ ಯಾವ ದಿನಸಿ ಕಳ್ಳತನವಾಯಿತು ಎಂದು ನನಗೆ ಗೊತ್ತಿಲ್ಲ. ಆ ದಿನ ಸ್ಥಳದಲ್ಲಿ ಕಳ್ಳತನವಾಗಿರುವ ಬಗ್ಗೆ ಮುಖ್ಯೊಪಾಧ್ಯಯರಿಗೆ ನಾನೇ ತಿಳಿಸಿರುತ್ತೇನೆ ಅವರು ಬರುವವರೆಗೆ ನಾನು ಸ್ಥಳದಲ್ಲೇ ಇರುತ್ತೇನೆ. ನಂತರ ಮುಖ್ಯೋಪಾಧ್ಯಯರು ಸ್ಥಳಕ್ಕೆ ಬಂದು ನೋಡಿರುತ್ತಾರೆ. ಗ್ರಾಮಸ್ಥರು ಯಾರು ಇರಲಿಲ್ಲ. ತದನಂತರ ಎಸ್.ಡಿ.ಎಮ್.ಸಿ ಅಧ್ಯಕ್ಷರರನ್ನು ಮುಖ್ಯೋಪಾಧ್ಯಯರು ಬಂದ ನಂತರ ಮುಖ್ಯೋಪಾಧ್ಯಯರು ಕರೆಸಿರುತ್ತಾರೆ. ನಮ್ಮ ಶಾಲೆಯ ಸುತ್ತ ಆ ಸಮಯದಲ್ಲಿ ಯಾವುದೇ ಅಂಗಡಿ ಇರಲಿಲ್ಲ. ಕಳ್ಳತನವಾಗಿರುವ ವಿಷಯ ಮಕ್ಕಳಿಗೆ ನಾನು ತಿಳಿಸಿಲ್ಲ. ಕೊಣೆಯಲ್ಲಿ ಸಿಲಿಂಡರ್ ಮತ್ತು ಬೆಳೆಗಳನ್ನು ತೆಗೆದುಕೊಂಡಿದ್ದರು ಪಾತ್ರೆಯಲ್ಲ ಹಾಗೆ ಇತ್ತು.

2. ಕೊಣೆಗೆ ಹಾಕಿದ ಬೀಗ ದಪ್ಪ ಬೀಗ. ಅದನ್ನು ಮುರಿದು ಕೆಳಗೆ ಹಾಕಿದ್ದರು. ಅದನ್ನು ಪೋಲಿಸರು ವಶಪಸಿಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಯಾವುದೇ ಕಳ್ಳತನ ಆಗಿಲ್ಲ ಆಹಾರ ಪದಾರ್ಥಗಳನ್ನು ನಾವೇ ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯೊಯಾಪಾಧ್ಯಯರು ಹೇಳಿದ ಕೆಲಸ ಮಾಡುತ್ತೇನೆ ಎಂದರೆ ಸರಿ. ಮುಖ್ಯೊಪಾಧ್ಯಯರ ಹೇಳಿಕೆ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಶಾಲೆ ಕಳ್ಳತನ ಮಾಡಿಲ್ಲ ಆದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1182/2019**

**ಪಿಡಬ್ಲೂ-10**

**ಸಿಡಬ್ಲೂ-9**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೋಭಾ |
| ಗಂಡನ ಹೆಸರು | - | ಮಾದನಾಯಕ |
| ವಯಸ್ಸು | - | 45 |
| ಕೆಲಸ | - | ಸರ್ಕಾರಿ ನೌಕರರು, ದೊಡ್ಡೇಕೊಪ್ಪಲು ಹೈಸ್ಕೂಲ್ |
| ವಾಸ | - | ಕೆ.ಆರ್.ನಗರ |

**ದಿನಾಂಕ 04.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನಾನು ದೊಡ್ಡಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ಡಿ ಗ್ರೂಪ್ ನೌಕರಳಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ 1 ರವರು ಸದರಿ ಶಾಲೆಗೆ ಮುಖ್ಯೋಪಾಧ್ಯಯರು ಆಗಿರುತ್ತಾರೆ. ಚಾಸಾ 10 ರವರು ಸದರಿ ಶಾಲೆಯಲ್ಲಿ ಅಡಿಗೆ ಕೆಲಸ ಮಾಡುತ್ತಿದ್ದಾರೆ. ನಾನು ಸದರಿ ಶಾಲೆಯಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ದಿಃ 19.08.2014 ರಂದು ಶಾಲೆ ಮುಗಿದ ಕಾರಣ ಶಾಲೆಗೆ ಬಾಗಿಲು ಹಾಕಿಕೊಂಡು ಮನೆಗೆ ಹೋಗಿರುತ್ತೇವೆ. ಒಂದು ದಿನ ದಿಃ 20.08.2014 ರಂದು ಬೆಳಿಗ್ಗೆ 9 ಗಂಟೆಗೆ ಶಾಲೆಯ ಬಳಿ ಬಂದು ನೋಡಲಾಗಿ ಯಾರು ಕಳ್ಳರು ಸದರಿ ಶಾಲೆಯ ಅಡಿಗೆ ಮನೆಯ ಬೀಗ ಒಡೆದು ಅಡಿಗೆ ಮನೆಯಲ್ಲಿದ್ದ ಗ್ಯಾಸ್, ಸಿಲಿಂಡರ್ ಹಾಗೂ ಅಡಿಗೆ ಸಾಮಾನುಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಕಳುವಾಗಿರುವ ಗ್ಯಾಸ್ ಸಿಲಿಂಡರ್ ನಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಬಿಸಿ ಊಟ ತಯಾರಿಸಲು ಉಪಯೋಗಿಸುತ್ತಿದ್ದೇವು. ಸಾಕ್ಷಿಯು ನಿಪಿ 3 ರಲ್ಲಿರುವ ಗ್ಯಾಸ್ ಸಿಲಿಂಡರ್ ನೋಡಿ ಗುರುತಿಸಿರುತ್ತಾರೆ. ಸದರಿ ಗ್ಯಾಸ್ ಸಿಲಿಂಡರ್ ಕಳುವಾಗಿದ್ದ ನಮ್ಮ ಶಾಲೆಯ ಸಿಲಿಂಡರ್ ಆಗಿರುತ್ತದೆ. ನಮ್ಮ ಶಾಲೆಯ ಬೀಗವನ್ನು ಜಜ್ಜಿ, ಮುರಿದು ಹಾಕಿ ಶಾಲೆಯಲ್ಲಿ ಕಳ್ಳತನ ಮಾಡಿರುವುದು ಕಂಡುಬಂದಿರುತ್ತದೆ.

**<u>ಪಾಟೀ ಸವಾಲು ಶ್ರೀ ಎಂ.ಸಿ.ಎಸ್ ಆರೋಪಿತರ ಪರ ವಕೀಲರುಃ</u>**

ನಾನು ಶಾಲೆಯಲ್ಲಿ ಕಸ ಹೊಡಿಯುವುದು, ಟೀ ಕೊಡುವುದು ಹಾಗೂ ಇತರೆ ಡಿ ಗ್ರೂಪ್ ನೌಕರರ ಕೆಲಸ ಮಾಡುತ್ತಿದ್ದೆ. ನಮ್ಮ ಶಾಲೆಯ ಅಡಿಗೆ ಮನೆಯ ಬೀಗದ ಕೈ ಮುಖ್ಯೋಪಾಧ್ಯಯರ ಬಳಿ ಇರುತ್ತಿತ್ತು. ಪ್ರತಿದಿನ ನಾನು ಮುಖ್ಯೋಪಾಧ್ಯಯರ ಬಳಿ ಬೀಗ ತೆಗೆದುಕೊಂಡು ನಾನು ಅಡಿಗೆ ಮನೆಯ ಬೀಗ ತೆಗೆಯುತ್ತಿದ್ದೆ. ನಾವು ಅಡಿಗೆ ಮನೆಗೆ ದಪ್ಪ ಬೀಗ ಹಾಕಿದ್ದೇವು. ದಪ್ಪ ಬೀಗವನ್ನೇ ಒಡೆದು ಕೆಳಗೆ ಬೀಳಿಸಿದ್ದರು. ಬಿಗ ಅಲ್ಲೇ ಇತ್ತು. ಅದನ್ನು ಪೋಲಿಸರಿಗೆ ನೀಡಿದ್ದೇವು. ನ್ಯಾಯಾಲಯದ ಮುಂದೆ ಬೀಗ ಇಲ್ಲ. ನಾನು ಅಡಿಗೆ ಮನೆಯಲ್ಲಿ ಸಿಲಿಂಡರ್, ಅಕ್ಕಿ ಮತ್ತು ಬೆಳೆ ಇತ್ತು ಎಷ್ಟು ಪ್ರಮಾಣದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಕೋಣೆಯಿಂದ ಅಕ್ಕಿ, ಬೆಳೆ ಮತ್ತು ಸಿಲಿಂಡರ್ ತೆಗೆದುಕೂಂಡು ಹೋಗಿದ್ದಾರೆ ಯಾವುದನ್ನು ಉಳಿಸಿರಲಿಲ್ಲ ಕೋಣೆ ಖಾಲಿ ಇತ್ತು.

2. ನಿಪಿ 3 ರಲ್ಲಿರುವ ಸಿಲಿಂಡರ್ ನಮ್ಮದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಭಾವಚಿತ್ರದಲ್ಲಿ ನಮ್ಮ ಸರ್ ನಿಂತಿದ್ದಾರೆ ಅದು ನಮ್ಮದೇ ಸಿಲಿಂಡರ್ ಎಂದು ನುಡಿಯುತ್ತಾರೆ. ಪ್ರತಿತಿಂಗಳು ಸಾಮಾಗ್ರಿಗಳು ಬಂದಾಗ ಮುಖ್ಯೋಪಾಧ್ಯಯರು ಇಂಟೆಂಟ್ ಬರೆಯುತ್ತಾರೆ ಎಂದರೆ ಸರಿ. ಪ್ರತಿದಿನ ಅಡಿಗೆಗೆ ಸಾಮಾನು ಕೊಡುವಾಗ ಇಂಟೆಂಟ್ ಬರೆಯುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮುಖ್ಯೋಪಾಧ್ಯಯರು ಹೇಳಿದ ಕೆಲಸವನ್ನು ಮಾತ್ರ ಮಾಡುತ್ತೇನೆ. ಮುಖ್ಯೋಪಾಧ್ಯಯರು ಸಾಕ್ಷಿ ಹೇಳು ಎಂದಿದ್ದಕ್ಕೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಕಳ್ಳತನ ಆಗಿಲ್ಲ ಆಹಾರ ಪದಾರ್ಥಗಳನ್ನು ನಾವೇ ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ